# ಶ್ರೀರಾಮಕೃಷ್ಣರ ಕಾಶೀಯಾತ್ರೆ

**ಸ್ವಾಮಿ ರಾಘವೇಶಾನಂದ**

ಮೋಕ್ಷಧಾಮವಾದ ಕಾಶೀಕ್ಷೇತ್ರವು ಅತ್ಯಂತ ಪ್ರಾಚೀನ ಕಾಲದಿಂದಲೇ ಹಿಂದೂಗಳ ಶ್ರದ್ಧಾಕೇಂದ್ರವಾಗಿದೆ. ಶ್ರೀರಾಮಕೃಷ್ಣರು ಕಾಶೀ ಕ್ಷೇತ್ರದ ದರ್ಶನ ಮಾಡಿ ಬಂದುದು ಈ ಕ್ಷೇತ್ರದ ಮಹಿಮೆ ಇನ್ನಷ್ಟು ಹೆಚ್ಚುವಂತೆ ಮಾಡಿತು. ಈ ಬಗ್ಗೆ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾರೆ. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.



ಕಾಶಿ - ಹಳೆಯ ಚಿತ್ರ

**ಈ** ವರ್ಷದ 'ವಿವೇಕಪ್ರಭ'ದ ವಿಶೇಷ ಸಂಚಿಕೆಯ ಶೀರ್ಷಿಕೆ ತೀರ್ಥಕ್ಷೇತ್ರದ ಯಾತ್ರೆ ಎಂದು ನೋಡಿದಾಗ ಶ್ರೀರಾಮಕೃಷ್ಣರ ಕಾಶೀತೀರ್ಥದ ಯಾತ್ರೆಯ ಬಗ್ಗೆ ಬರೆಯೋಣವೆನ್ನಿಸಿತು. ಭಗೀರಥನು ತಾಯಿ ಗಂಗೆಯನ್ನು ಶಿವನ ಜಟೆಯಿಂದ ಭೂಲೋಕಕ್ಕೆ ತರಬೇಕೆಂದು ತಪಸ್ಸು ಮಾಡಿ ಶಿವನಿಂದ ವರ ಪಡೆದ. ಆಗ ಆ ಸುದ್ದಿಯನ್ನು ಕೇಳಿ ಗಂಗೆ ನಡುಗಿದಳಂತೆ. ಕಾರಣ ಲಕ್ಷಾಂತರ ಜನರ ಹಿಂಡು ತಮ್ಮ ಪಾಪ ಕಳೆದುಕೊಳ್ಳಲು, ಮುಕ್ತಿಯನ್ನು ಪಡೆಯಲು ನನ್ನಲ್ಲಿಗೆ ಬಂದು ಸ್ನಾನ ಮಾಡುತ್ತಾರೆ. ಅವರೆಲ್ಲರ ಪಾಪವನ್ನು ತಡೆದುಕೊಳ್ಳಲಾಗುತ್ತದೆಯೇ ಎಂದು ಭಯಪಟ್ಟಳಂತೆ. ಆಗ ಅಲ್ಲಿದ್ದ ದೇವರಿಂದ ಅವಳಿಗೆ ಆಶ್ವಾಸನೆ ಹೀಗೆ ಸಿಕ್ಕಿತಂತೆ: ''ನಿನ್ನ ಬಳಿಗೆ ಬರೀ ಪಾಪಿಗಳಷ್ಟೇ ಅಲ್ಲ ಬರುವುದು. ಆದರೆ ಋಷಿಮುನಿಗಳು, ಸಾಧಕರು, ಸಂತರು ಎಲ್ಲರೂ ನಿನ್ನಲ್ಲಿ ಸ್ನಾನ ಮಾಡುವರು. ಅವರ ಸ್ಪರ್ಶದಿಂದ ನಿನ್ನ ಮೈ ಪುಳಕಿತವಾಗುವುದು'' ಎಂದರಂತೆ. ಆಗ ಅವಳಿಗೆ ಸಮಾಧಾನವಾಯಿತಂತೆ. ಅಂತಹ ಪುರುಷರುಗಳಲ್ಲಿ ಅವತಾರಶ್ರೇಷ್ಠರಾದ ಶ್ರೀರಾಮಕೃಷ್ಣರೂ ಒಬ್ಬರು.

ಇದನ್ನೇ ನಾರದ ಮಹರ್ಷಿಗಳು ತಮ್ಮ 'ನಾರದ ಭಕ್ತಿಸೂತ್ರ' ಎಂಬ ಗ್ರಂಥದಲ್ಲಿ 'ತೀರ್ಥೀಕುರ್ವಂತಿ ತೀರ್ಥಾನಿ' ಎಂದು ವಿವರಿಸುತ್ತಾರೆ. ಅಂದರೆ 'ಸಂತರು ತೀರ್ಥಸ್ಥಳಗಳನ್ನು ಪವಿತ್ರಗೊಳಿಸುತ್ತಾರೆ' ಎಂದರ್ಥ. ಇಂತಹ ತೀರ್ಥ ಸ್ಥಳಗಳಿಗೆ ಭೇಟಿಕೊಟ್ಟ ಶ್ರೀರಾಮಕೃಷ್ಣರ ಕಾಶೀಯಾತ್ರೆಯ ಬಗ್ಗೆ ನೋಡೋಣ.

ಶ್ರೀರಾಮಕೃಷ್ಣರು ಮಥುರನೊಡನೆ ೧೮೬೮, ಜನವರಿ ೨೭ನೇ ತಾರೀಖು ಕಲ್ಕತ್ತೆಯಿಂದ ಹೊರಟರು. ಮಾರ್ಗದಲ್ಲಿ ದೇವಘರದಲ್ಲಿ ವೈದ್ಯನಾಥನ ದರ್ಶನಕ್ಕಾಗಿ ಕೆಲವು ದಿನಗಳಿದ್ದು, ಕೊನೆಗೆ ಕಾಶಿಯನ್ನು ತಲುಪಿದರು. ಶ್ರೀರಾಮಕೃಷ್ಣರು ಈಗ ಕಾಶೀ ಕ್ಷೇತ್ರದ ದಿವ್ಯವಲಯದಲ್ಲಿದ್ದಾರೆ. ವರುಣ ಮತ್ತು ಅಸಿ ಎಂಬ ಎರಡು ನದಿಗಳ ದಡದಲ್ಲಿರುವುದರಿಂದ ಇದಕ್ಕೆ ವಾರಾಣಸಿ ಎಂಬ ಹೆಸರೂ ಇದೆ. ತೀರ್ಥಕ್ಷೇತ್ರಗಳಲ್ಲಿ ಇದಕ್ಕೆ ಅಗ್ರಸ್ಥಾನ. ಇದು ಶಿವನ ಶಾಶ್ವತ ವಾಸಸ್ಥಾನವೆಂದು ಪುರಾಣಗಳಲ್ಲಿ ಹೇಳಿದೆ. ಅಲ್ಲದೆ ಮೋಕ್ಷದಾಯಕ ಸಪ್ತಕ್ಷೇತ್ರಗಳಲ್ಲಿ ಇದು ಪ್ರಥಮವೆಂದು ಹೇಳುತ್ತಾರೆ. ಶ್ರೀರಾಮಕೃಷ್ಣರಂತೂ ಈ ಕಾಶಿಯನ್ನು ಸಂಪರ್ಕಿಸಲು ಬಹಳ ಕೌತುಕರಾಗಿದ್ದರು.

ಯಾತ್ರಿಕರೆಲ್ಲಾ ದೋಣಿಯಲ್ಲಿ ಗಂಗಾನದಿಯನ್ನು ದಾಟಿ ಕಾಶಿಯನ್ನು ಪ್ರವೇಶಿಸಿದರು. ಆಗ ಶ್ರೀರಾಮಕೃಷ್ಣರಿಗೆ ಅಲ್ಲೊಂದು ಅದ್ಭುತ ದರ್ಶನವಾಯಿತು. ಶಾಸ್ತ್ರಗಳಲ್ಲಿ ಹೇಳಿರುವಂತೆಯೇ ಆ ಶಿವಪುರಿಯು ನಿಜವಾಗಿಯೂ ಬಂಗಾರದಿಂದ ನಿರ್ಮಿತವಾದಂತೆ ಅವರಿಗೆ ಕಂಡಿತು. ಅಲ್ಲಿ ಮಣ್ಣು ಮತ್ತು ಕಲ್ಲಿನಿಂದ ನಿರ್ಮಿತವಾದುದು ಯಾವುದೂ ಇಲ್ಲವೆಂದು ಅವರು ಕಂಡರು.

ಸ್ಥೂಲ ದೃಷ್ಟಿಯಿಂದಲೂ ಕಾಶಿಯನ್ನು ಸುವರ್ಣನಗರವೆಂದು ಕರೆಯಲು ಸಾಧ್ಯವಿದೆ. ಕಾಶಿಯಲ್ಲಿ ಅಸಂಖ್ಯ ದೇವಸ್ಥಾನಗಳೂ ವಿಶಾಲ ಭವನಗಳೂ ಇವೆ.

ಗಂಗೆಯ ತೀರದಲ್ಲಿ ಎರಡು ಮೈಲಿ ದೂರ ಕಲ್ಲಿನಿಂದ ಕಟ್ಟಿದ, ವಿಶಾಲ ಮೆಟ್ಟಿಲುಗಳಿಂದ ಕೂಡಿದ ಅಸಂಖ್ಯ ಸ್ನಾನ ಘಟ್ಟಗಳಿವೆ. ಅಸಂಖ್ಯ ನೀರಿನ ಕಾಲುವೆ, ಬಾವಿ, ಕೊಳ ಮುಂತಾದವುಗಳಿಂದ

ಕೂಡಿದ, ತೋರಣದಿಂದ ಭೂಷಿತವಾದ ಅನೇಕ ರಸ್ತೆಗಳಿವೆ. ಅಲ್ಲದೆ ದೇವಾಲಯದಲ್ಲಿ ಶಿವನ ಸಾಕ್ಷಾತ್ ಶಕ್ತಿಯೇ ಶ್ರೀ ಅನ್ನ ಪೂರ್ಣೆಯ ರೂಪದಲ್ಲಿ ಇಲ್ಲಿ ಪ್ರತಿಷ್ಠಿತಳಾಗಿರುವಳು. ಅವಳೇ ಅನ್ನಮಯ ಪ್ರಾಣಮಯ ಕೋಶಗಳನ್ನು ಅನ್ನ ವಿತರಣೆಯ ಮೂಲಕ ಪೋಷಿಸುತ್ತಿರುವವಳು. ಅವಳೇ ಆ ಜೀವಿಗಳು ಬಹು ಬೇಗನೆ ಶ್ರೀ ವಿಶ್ವನಾಥನೊಡನೆ ಒಂದಾಗಿ ಮುಕ್ತಿ ಪಡೆಯುವಂತೆ ಮಾಡುತ್ತಿರುವವಳು. ಅದನ್ನೆಲ್ಲಾ ಭಾವಿಸಿ ಯಾರು ತಾನೇ ವಿಸ್ಮಯ ದಿಂದಲೂ ಭಕ್ತಿಪೂರ್ಣ ಹೃದಯದಿಂದ ತಲೆಬಾಗುವುದಿಲ್ಲ? ಭಾವಮುಖದಲ್ಲಿದ್ದ ಶ್ರೀರಾಮಕೃಷ್ಣರು ಇಲ್ಲಿಗೆ ಬಂದಕೂಡಲೇ ಈ ದಿವ್ಯ ಸುವರ್ಣಮಯ ಭಾವಪ್ರವಾಹವು ಶಿವಪುರಿಯಲ್ಲಿ ಎಲ್ಲೆ ಲ್ಲಿಯೂ ಓತಪ್ರೋತವಾಗಿರುವಂತೆ ಕಂಡಿತು. ಆ ಭಾವ ಪ್ರವಾ ಹವೇ ಘನೀಭೂತವಾಗಿ ಸುವರ್ಣ ನಗರಿಯಂತೆ ಅವರಿಗೆ ಕಂಡಿರು ವುದರಲ್ಲಿ ಆಶ್ಚರ್ಯವೇನು? ಹಾಗೆ ಪ್ರಕಾಶಿಸುತ್ತಿರುವುದರಿಂದಲೇ ಅದು 'ಕಾಶಿ'.

ಆ ದರ್ಶನದಿಂದಾಗಿ ಅವರಿಗೆ ಶಿವಮಹಿಮೆ, ಕಾಶೀಮಹಿಮೆ ಗಳ ಮೇಲೆ ದೃಢ ನಂಬಿಕೆಯುಂಟಾಯಿತು. ಎಷ್ಟರಮಟ್ಟಿಗೆ ಎಂದರೆ, 'ಇಂತಹ ಪವಿತ್ರಮಯವಾದ, ಸುವರ್ಣಮಯವಾದ ಕಾಶಿಯಲ್ಲಿ ಶೌಚಕ್ಕೆ ಹೋದರೆ ಅದನ್ನು ಅಪವಿತ್ರ ಮಾಡಿದಂ ತಾಗುತ್ತಲ್ಲ!' ಎಂಬ ಶಂಕೆ ಅವರ ಮನಸ್ಸಿನಲ್ಲಿ ಉಂಟಾಯಿತು. ಆದ್ದರಿಂದ ಅವರು ಮಥುರನಾಥನಿಗೆ ಹೇಳಿ, ಒಂದು ಪಲ್ಲಕ್ಕಿಯ ಏರ್ಪಾಟು ಮಾಡಿಸಿಕೊಂಡು ಶೌಚಾದಿಗಳಿಗೆ ಅಸಿ ನದಿಯನ್ನು ದಾಟಿ ಊರಾಚೆಗೆ ಹೋಗಿ ಬರುತ್ತಿದ್ದರು. ಆದರೆ ಕೆಲವು ದಿನ ಗಳಲ್ಲೇ ಅವರ ಭಾವವು ದೂರವಾದ್ದರಿಂದ ಆಮೇಲೆ ಹಾಗೆ ಮಾಡ ಬೇಕಾಗಲಿಲ್ಲ.

ಕಾಶಿಯ ಅಸಂಖ್ಯಾತ ದೇವಸ್ಥಾನಗಳು, ವಿಶಾಲ ಸೋಪಾನ ಗಳುಳ್ಳ ಹಲವಾರು ಸ್ನಾನಘಟ್ಟಗಳು, ರಸ್ತೆಗಳು ಅಲ್ಲಲ್ಲಿ ಸುಂದರ ಸಾಲಂಕೃತ ಕಮಾನುಗಳು, ತೋಟದ ಮನೆಗಳು, ಮಠಗಳು, ಆಶ್ರಮಗಳು; ಅಲ್ಲದೆ ಇವೆಲ್ಲಕ್ಕಿಂತ ಹೆಚ್ಚಾಗಿ ವೇದಾಭ್ಯಾಸಕ್ಕೆ ಬಂದ ವಟುಗಳ, ಸಾಧುಸಜ್ಜನರ, ಬಡಬಗ್ಗರ ಹಾಗೂ ಯಾತ್ರಿಕರ ಸೇವಾರ್ಥವಾಗಿ ಕಟ್ಟಲ್ಪಟ್ಟ ನೂರಾರು ಅನ್ನಸತ್ರಗಳು, ವಸತಿಗೃಹ ಗಳು ಹಾಗೂ ಆಸ್ಪತ್ರೆಗಳು – ಇವುಗಳನ್ನೆಲ್ಲ ವೀಕ್ಷಿಸಿದ ಶ್ರೀರಾಮ ಕೃಷ್ಣರ ಸಂತಸಕ್ಕೆ ಪಾರವೇ ಇರಲಿಲ್ಲ.

ಮಥುರನಾಥ ಕಾಶಿಯಲ್ಲಿ ಕೇದಾರಘಟ್ಟದ ಮೇಲಿನ ಕೆಲವು ಮನೆಗಳನ್ನು ಬಾಡಿಗೆಗೆ ತೆಗೆದುಕೊಂಡ. ಅಲ್ಲಿಗೆ ಹೋದುದೇ ಶ್ರೀರಾಮಕೃಷ್ಣರ ನಿರ್ದೇಶನದ ಮೇರೆಗೆ ಬ್ರಾಹ್ಮಣ ಪಂಡಿತರು ಗಳಿಗೆಲ್ಲಾ ಮೊದಲು ಅನ್ನದಾನ ಮಾಡಿದನು. ಅನಂತರ ಒಂದು ದಿನ ಅವರನ್ನೆಲ್ಲಾ ಕುಟುಂಬ ಸಮೇತರಾಗಿ ಆಹ್ವಾನಿಸಿ ಭೂರಿ ಭೋಜನವನ್ನಿತ್ತು, ದಕ್ಷಿಣೆ ನೀಡಿ ಗೌರವಿಸಿದ. ಅಷ್ಟೇ ಅಲ್ಲ, ಅವನು ಶ್ರೀರಾಮಕೃಷ್ಣರ ಆದೇಶದಂತೆ ಯಾರು ಯಾರಿಗೆ ಏನೇನು ಬೇಕೋ ಅವನ್ನೆಲ್ಲ ಕೊಟ್ಟನು. ಪಾತ್ರೆ, ಬಟ್ಟೆ, ಕಂಬಳಿ, ಪಾದರಕ್ಷೆ ಮುಂತಾದ ಅನೇಕ ಆವಶ್ಯಕ ವಸ್ತುಗಳನ್ನು ದಾನ ಮಾಡಿದನು. ಮೊದಲನೆ ದಿನ ಅನ್ನದಾನದ ಸಂದರ್ಭದಲ್ಲಿ ಬ್ರಾಹ್ಮಣರ ನಡುವೆ ತುಂಬಾ ಜಗಳ, ಕದನ, ಕೋಲಾಹಲ ನಡೆದಿತ್ತು. ಇದನ್ನು ನೋಡಿ ಶ್ರೀರಾಮಕೃಷ್ಣರು ತುಂಬಾ ಬೇಸರಗೊಂಡರು. ಕಾಶಿಯಲ್ಲಿಯೂ ಇತರ ಕಡೆಗಳಂತೆ ಜನರು ಕಾಮ-ಕಾಂಚನಾಸಕ್ತರಾಗಿರುವುದನ್ನು ನೋಡಿ ತುಂಬಾ ಹತಾಶಭಾವ ಅವರಲ್ಲಿ ಉಂಟಾಗಿತ್ತು. ಅವರು ಕಂಬನಿಗರೆಯುತ್ತಾ ಜಗನ್ಮಾತೆಗೆ ಹೇಳಿದ್ದರು: ''ತಾಯಿ, ನೀನು ಏಕೆ ಇಲ್ಲಿಗೆ ನನ್ನನ್ನು ಕರೆದುಕೊಂಡು ಬಂದೆ? ದಕ್ಷಿಣೇಶ್ವರದಲ್ಲೇ ನಾನು ತುಂಬಾ ಚೆನ್ನಾಗಿದ್ದೆ.'' ಅಂದು ಅವರಿಗೆ ಹಾಗೆ ಅನ್ನಿಸಿ ದ್ದರೂ, ಅಲ್ಲಿ ಅವರಿಗೆ ಅದ್ಭುತ ಆಧ್ಯಾತ್ಮಿಕ ದರ್ಶನಗಳು ಆದವು.

ಕಾಶಿಯಲ್ಲಿರುವಷ್ಟು ದಿನವೂ ಶ್ರೀರಾಮಕೃಷ್ಣರು ವಿಶ್ವನಾಥ ಸ್ವಾಮಿಯ ದರ್ಶನಕ್ಕೆ ಹೋಗುತ್ತಿದ್ದರು. ಇದಲ್ಲದೆ ಅಲ್ಲಿರುವ ಕೇದಾರನಾಥ, ದುರ್ಗಾ, ಅನ್ನಪೂರ್ಣೆ, ಕಾಲಭೈರವ, ಬಿಂದು ಮಾಧವ ಮುಂತಾದ ಅನೇಕ ದೇವದೇವಿಯರ ಪ್ರಸಿದ್ಧ ದೇವಾ ಲಯಗಳಿಗೂ ಅವರು ಹೋಗಿಬರುತ್ತಿದ್ದರು. ಅವರಿಗೆ ಹೆಚ್ಚು ನಡೆಯಲಾಗುತ್ತಿರಲಿಲ್ಲ. ಆದ್ದರಿಂದ ಪಲ್ಲಕ್ಕಿಯಲ್ಲೇ ಸಂಚಾರ. ಹೃದಯನು ಜೊತೆಯಲ್ಲಿರುತ್ತಿದ್ದ. ದೇವದರ್ಶನಕ್ಕೆ ಹೋಗು ವಾಗಲೇ ಶ್ರೀರಾಮಕೃಷ್ಣರು ಭಾವಾವಿಷ್ಟರಾಗುತ್ತಿದ್ದರು. ಇನ್ನು ಆಯಾ ದೇವದೇವಿಯರ ಸನ್ನಿಧಿಯಲ್ಲಂತೂ ಹೇಳಬೇಕಾಗಿಯೇ ಇಲ್ಲ. ಎಲ್ಲಾ ದೇವಾಲಯಗಳಲ್ಲೂ ಅವರಿಗೆ ಭಾವಾವೇಶವಾಗು ತ್ತಿತ್ತು. ಆದರೆ ಕೇದಾರನಾಥ ಸ್ವಾಮಿಯ ಮಂದಿರದಲ್ಲಿ ಮಾತ್ರ ಅದು ಅತ್ಯಂತ ಗಾಢವಾಗಿರುತ್ತಿತ್ತು.

ಕಾಶಿಯಲ್ಲಿ ಶ್ರೀರಾಮಕೃಷ್ಣರಿಗೆ ಮತ್ತೊಂದು ಅಪೂರ್ವ ದರ್ಶನ ವಾಯಿತು. ಇಲ್ಲಿ ಮಣಿಕರ್ಣಿಕಾ ತೀರ್ಥ, ದಶಾಶ್ವಮೇಧ ತೀರ್ಥ ಇತ್ಯಾದಿ ಪ್ರಸಿದ್ಧ ಪಂಚತೀರ್ಥಗಳಿವೆ. ಇವುಗಳನ್ನು ನೋಡಲು ಗಂಗಾನದಿಯ ಮೇಲೆ ದೋಣಿಯ ಮೂಲಕವೂ ಹೋಗ ಬಹುದು. ಒಂದು ದಿನ ಮಥುರ ಶ್ರೀರಾಮಕೃಷ್ಣರನ್ನು ಅಲ್ಲಿಗೆಲ್ಲಾ ಕರೆದುಕೊಂಡು ಹೊರಟ. ಮಣಿಕರ್ಣಿಕೆಯ ಪಕ್ಕದಲ್ಲೇ ಕಾಶಿಯ ಪ್ರಮುಖ ಸ್ಮಶಾನಭೂಮಿ. ಮಥುರನ ದೋಣಿ ಈ ಸ್ಥಳಕ್ಕೆ ಬಂದಾಗ ಅಲ್ಲಿ ಹಲವಾರು ಶವಗಳನ್ನು ಸುಡುತ್ತಿದ್ದುದು ಕಾಣಿಸು ತ್ತಿತ್ತು. ಅವುಗಳಿಂದ ದಟ್ಟವಾದ ಹೊಗೆ ಹೊಮ್ಮುತ್ತಿತ್ತು. ಭಾವ ಮಯರಾಗಿದ್ದ ಶ್ರೀರಾಮಕೃಷ್ಣರು ಅರೆಬಿರಿದ ನೇತ್ರಗಳಿಂದ ಅತ್ತಲೇ ನೋಡುತ್ತಾ ದೋಣಿಯಲ್ಲಿ ಶಾಂತವಾಗಿ ಕುಳಿತಿದ್ದರು. ಆದರೆ ಇದ್ದ ಕ್ಕಿದ್ದಂತೆ ರೋಮಾಂಚಿತರಾಗಿ ಎದ್ದು ನಿಂತರು. ಅದ್ಭುತವೇನನ್ನೋ ಕಂಡು ದೋಣಿಯ ತುದಿಗೆ ಓಡಿದರು. ಅಲ್ಲಿ ದೋಣಿಯ ಅಂಚಿ ನಲ್ಲೇ ನಿಂತು ಸಮಾಧಿಸ್ಥರಾಗಿಬಿಟ್ಟರು. ಅದನ್ನು ನೋಡಿದವರಿಗೆ, ಎಲ್ಲಿ ಅವರು ನದಿಗೆ ಬಿದ್ದು ಪ್ರವಾಹದಲ್ಲಿ ಮುಳುಗಿ ಹೋಗು ವರೋ ಎಂದೆನಿಸಿತು. ತಕ್ಷಣ ಮಥುರನ ಕಡೆಯ ಪುರೋಹಿತರು ಹಾಗೂ ಅಂಬಿಗರು ಅವರನ್ನು ಬೀಳಗೊಡದಂತೆ ಹಿಡಿಯಲು ಧಾವಿಸಿದರು. ಆದರೆ ಹಾಗೇನೂ ಮಾಡಬೇಕಾಗಿ ಬರಲಿಲ್ಲ. ಏಕೆಂ ದರೆ ಶ್ರೀರಾಮಕೃಷ್ಣರು ಅಲ್ಲಾಡದೆ ಸ್ಥಿರವಾಗಿ ನಿಂತಿದ್ದರು. ಅವರ ಮುಖಮಂಡಲದಲ್ಲಿ ಅಲೌಕಿಕ ಮಂದಹಾಸವೊಂದು ಲಾಸ್ಯ



ಮಣಿಕರ್ಣಿಕಾ ಘಾಟ್, ಕಾಶಿ

ವಾಡುತ್ತಿತ್ತು. ದಿವ್ಯ ಜ್ಯೋತಿಯೊಂದು ಪ್ರಕಾಶಿಸುತ್ತಿತ್ತು. ಆ ಜ್ಯೋತಿಯು ಕ್ರಮೇಣ ಸುತ್ತಮುತ್ತಲಿನ ಪ್ರದೇಶವನ್ನೇ ಬೆಳಗಿ ಪ್ರಕಾಶಮಾನವಾಗಿಸಿತು. ಮಥುರನೂ ಹೃದಯನೂ, ಅದನ್ನೇ ದಿಟ್ಟಿಸುತ್ತಾ ಬಳಿಯಲ್ಲೇ ನಿಂತಿದ್ದರು. ಅಂಬಿಗರಂತೂ ಶ್ರೀರಾಮಕೃಷ್ಣರ ಈ ಅಪೂರ್ವಭಾವವನ್ನು ನೋಡಿ ಬೆರಗಾಗಿ ಭಯಭಕ್ತಿಯಿಂದ ದೂರದಲ್ಲಿ ನಿಂತು ವೀಕ್ಷಿಸಿದರು. ಸ್ವಲ್ಪ ಹೊತ್ತಿನ ಮೇಲೆ ಅವರ ಈ ದಿವ್ಯಭಾವ ಮರೆಯಾಯಿತು. ಎಲ್ಲರೂ ಸಮಾಧಾನದಿಂದ ಮಣಿಕರ್ಣಿಕಾ ಘಟ್ಟದಲ್ಲಿಳಿದು ಸ್ನಾನ ಮುಗಿಸಿ, ಆ ಪುಣ್ಯಕ್ಷೇತ್ರದಲ್ಲಿ ಯಥಾಶಕ್ತಿ ದಾನಾದಿಗಳನ್ನು ಮಾಡಿ ದೋಣಿ ಹತ್ತಿದರು. ಶ್ರೀರಾಮಕೃಷ್ಣರು ತಮಗಾದ ದಿವ್ಯ ಅನುಭವವನ್ನು ಹೀಗೆ ವಿವರಿಸಿದರು.

''ಆ ಮಣಿಕರ್ಣಿಕೆಯ ಸ್ಮಶಾನದಲ್ಲಿ ಒಬ್ಬ ದಿವ್ಯ-ಭವ್ಯ-ಪುರುಷ! ಕಂದು ಬಣ್ಣದ ಜಟೆ! ದೀರ್ಘಾಕಾರದ ಶ್ವೇತ ಶರೀರ. ಆತ ತನ್ನ ಗಂಭೀರ ನಡೆಯಿಂದ ಪ್ರತಿಯೊಂದು ಚಿತೆಯ ಬಳಿಗೆ ಬಂದು, ಅಲ್ಲಿ ಮಲಗಿದ್ದ ಮೃತನನ್ನು ಪ್ರಯತ್ನಪೂರ್ವಕವಾಗಿ ಎಬ್ಬಿಸಿ ಕಿವಿಯಲ್ಲಿ ಪವಿತ್ರವಾದ ಬ್ರಹ್ಮಮಂತ್ರ ಉಚ್ಚರಿಸುತ್ತಿದ್ದ. ಆತನ ಜೊತೆಗೆ ಸರ್ವಶಕ್ತಿ ಸಮನ್ವಿತೆಯಾದ ಜಗದಂಬೆ! ಅವಳು ಮಹಾಕಾಳಿಯ ರೂಪದಿಂದ ಜೀವಾತ್ಮನ ಮತ್ತೊಂದು ಪಕ್ಕದಲ್ಲಿ ಚಿತೆಯ ಮೇಲೆ ಕುಳಿತುಕೊಂಡು ಆತನ ಸ್ಥೂಲ-ಸೂಕ್ಷ್ಮ- ಕಾರಣ ಶರೀರಗಳಲ್ಲಿ ಅಂತರ್ಗತವಾದ ಜನ್ಮಾಂತರಗಳ ಸಂಸ್ಕಾರಗಳ ಬಂಧನಗಳಿಂದ ಆತನನ್ನು ಮುಕ್ತನನ್ನಾಗಿಸುತ್ತಿದ್ದಳು! ಮತ್ತು ಮೋಕ್ಷ ದ್ವಾರವನ್ನು ಸ್ವ-ಹಸ್ತದಿಂದೇ ತೆರೆದು ಅಖಂಡ ಸಚ್ಚಿದಾನಂದದಲ್ಲಿ ಸೇರಿಕೊಳ್ಳುವಂತೆ ಆತನನ್ನು ಪ್ರೇರಿಸುತ್ತಿದ್ದಳು. ಈ ರೀತಿಯಾಗಿ, ಹಲವು ಯುಗಗಳ ಯೋಗದಿಂದ, ತಪಸ್ಸಿನಿಂದ ಮಾತ್ರವೇ ಸಿದ್ಧಿಸಬಹುದಾದ ಅದ್ವೈತಾನುಭವದ ಅಮಿತಾನಂದವನ್ನು ಕಾಶಿ ವಿಶ್ವನಾಥನು ಆ ಜೀವಿಗಳಿಗೆ ಕೃಪಾಮಾತ್ರದಿಂದ ಅನುಗ್ರಹಿಸಿ ಆತನನ್ನು ಕೃತಾರ್ಥನನ್ನಾಗಿ ಮಾಡುತ್ತಿದ್ದ. ಇದನ್ನು ನಾನು ಸಾಕ್ಷಾತ್ತಾಗಿ ಕಂಡೆ!''

ಇದನ್ನು ಕೇಳಿದ ಮಥುರನಿಗೆ ತಾನು ಶ್ರೀರಾಮಕೃಷ್ಣರನ್ನು ಕಾಶಿಗೆ ಕರೆತಂದು ಧನ್ಯನಾದೆನೆಂದೆನಿಸಿತು. ಜೊತೆಗೆ ಬಂದಿದ್ದ ಕೆಲವು ಶಾಸ್ತ್ರಜ್ಞರಾದ ಪಂಡಿತರಂತೂ ಆಶ್ಚರ್ಯದಿಂದ ಶ್ರೀರಾಮಕೃಷ್ಣರಿಗೆ ಹೀಗೆಂದರು:

''ನಿಜಕ್ಕೂ ನಿಮಗಾದ ಅನುಭವ ಪರಮಾದ್ಭುತ! ಜೀವಾತ್ಮನು ಈ ಕಾಶೀಕ್ಷೇತ್ರದಲ್ಲಿ ಸತ್ತರೆ ವಿಶ್ವನಾಥಸ್ವಾಮಿಯು ಆತನಿಗೆ ಮೋಕ್ಷವನ್ನು ಕರುಣಿಸುತ್ತಾನೆಂದು ಕಾಶೀಕಾಂಡದಲ್ಲಿ ಹೇಳಲಾಗಿದೆ. ಆದರೆ ಶ್ರೀ ವಿಶ್ವನಾಥನು ಅದನ್ನು ಹೇಗೆ ಕೊಡುತ್ತಾನೆಂಬುದರ ವಿವರ ಅದರಲ್ಲಿರಲಿಲ್ಲ. ಅದೀಗ ನಿಮಗಾದ ಈ ದಿವ್ಯದರ್ಶನದಿಂದ ಸ್ಪಷ್ಟವಾಯಿತು. ಸತ್ಯವಾಗಿಯೂ ನಿಮಗಾದ ದರ್ಶನವು ಶಾಸ್ತ್ರದಲ್ಲಿ ಬರೆದಿಟ್ಟ ವಿಷಯಕ್ಕಿಂತಲೂ ಅತಿಶಯವಾಗಿದೆ!''

ಶ್ರೀರಾಮಕೃಷ್ಣರು ಕಾಶಿಯಲ್ಲಿದ್ದಾಗ ಅಲ್ಲಿದ್ದ ಪ್ರಸಿದ್ಧ ಸಾಧುಸಂತರನ್ನು ನೋಡಲು ಹೋಗಿದ್ದರು. ಅವರ ಪೈಕಿ ತ್ರೈಲಂಗ ಸ್ವಾಮಿಗಳು ಅವರನ್ನು ವಿಶೇಷವಾಗಿ ಆಕರ್ಷಿಸಿದ್ದರು. ಅವರ ಬಗ್ಗೆ ಬಹಳಷ್ಟು ಬಾರಿ ನೆನಪಿಸಿಕೊಂಡು ಹೇಳುತ್ತಿದ್ದರು: ''ಸಾಕ್ಷಾತ್ ವಿಶ್ವನಾಥನೇ ಅವರ ಶರೀರವನ್ನು ಆಶ್ರಯಿಸಿಕೊಂಡು ಪ್ರಕಾಶಿಸುತ್ತಿರುವಂತೆ ಕಂಡಿತು. ಅವರು ಅಲ್ಲಿರುವುದರಿಂದ ಕಾಶಿಯು ಬೆಳಗುತ್ತಿದೆ. ಅವರು ಉನ್ನತ ಜ್ಞಾನಾವಸ್ಥೆಯಲ್ಲಿರುವರು. ಅವರಿಗೆ ಶರೀರ ಪ್ರಜ್ಞೆಯೇ ಇಲ್ಲ. ಬಿಸಿಲಿನಿಂದ ಮರಳು ಎಷ್ಟು ಕಾದಿತ್ತೆಂದರೆ, ಅದರ ಮೇಲೆ ಕಾಲಿಡುವುದೂ ಅಸಾಧ್ಯ. ಹಾಗಿರುವಾಗ ಅವರು ಅದರ ಮೇಲೆ ಸುಖವಾಗಿ ಮಲಗಿಕೊಂಡಿದ್ದರು. ನಾನು ಅಕ್ಕಿಯ ಪಾಯಸವನ್ನು ಮಾಡಿ ಅವರಿಗೆ ತೆಗೆದುಕೊಂಡು ಹೋಗಿ ಉಣಿಸಿದೆ. ಆಗ ಅವರು ಮಾತನಾಡುತ್ತಿರಲಿಲ್ಲ. ಮೌನಿಯಾಗಿದ್ದರು. ನಾನು ಸನ್ನೆಯ ಮೂಲಕ ದೇವರೊಬ್ಬನೇ ಅಥವಾ ಅನೇಕನೇ ಎಂದು ವಿಚಾರಿಸಿದೆ. ಅವರೂ ಸನ್ನೆಯ ಮೂಲಕ ಉತ್ತರಿಸಿದರು: 'ಸಮಾಧಿಯಲ್ಲಿರುವಾಗ ಒಬ್ಬನೇ. ಅದಿಲ್ಲದೆ ನಾನು, ನೀನು, ಜೀವ, ಜಗತ್ತು ಇತ್ಯಾದಿ ನಾನಾತ್ವದ ಜ್ಞಾನವಿರುವಾಗ ಅನೇಕ.' ಅವರನ್ನು ತೋರಿಸಿ ಹೃದಯನಿಗೆ ಹೇಳಿದೆ: 'ಇದನ್ನೇ ನಿಜವಾದ ಪರಮಹಂಸಾವಸ್ಥೆ ಎನ್ನುವುದು' ಎಂದು.''

ತ್ರೈಲಂಗ ಸ್ವಾಮಿಗಳು ಮಣಿಕರ್ಣಿಕಾ ಘಟ್ಟದ ಪಕ್ಕದಲ್ಲಿ ಒಂದು ಹೊಸ ಘಟ್ಟವನ್ನು ಕಟ್ಟಿಸುತ್ತಿದ್ದರು. ಶ್ರೀರಾಮಕೃಷ್ಣರು ಹೃದಯನಿಗೆ ಅಲ್ಲಿಗೆ ಕೆಲವು ಗುದ್ದಲಿ ಮಣ್ಣನ್ನು ಎತ್ತಿಹಾಕುವಂತೆ ಸೂಚಿಸಿದರು. ಹೃದಯ ಅದರಂತೆಯೇ ಮಾಡಿದ. ಸ್ವಾಮಿಗಳಿಗೆ ಇದು ಬಹಳ ಸಂತೋಷಕೊಟ್ಟಿತು. ಮತ್ತೊಂದು ದಿನ ಶ್ರೀರಾಮಕೃಷ್ಣರು ಅವರನ್ನು ತಮ್ಮ ಮನೆಗೇ ಕರೆಸಿಕೊಂಡು ಕೈಯಾರೆ ಬಡಿಸಿ ಉಪಚರಿಸಿದರು. ಆನಂದಮಯರಾದ ಶ್ರೀರಾಮಕೃಷ್ಣರು ಆನಂದವನ್ನೇ ಬಡಿಸಿದರು. ಆನಂದಮಯರಾದ ತ್ರೈಲಂಗ ಸ್ವಾಮಿಗಳು ಆನಂದವನ್ನೇ ಸವಿದರು. ಕಾಶಿಯಲ್ಲಿದ್ದಾಗಲೇ ಒಮ್ಮೆ ಶ್ರೀರಾಮಕೃಷ್ಣರು ನಾನಕ ಪಂಥೀಯರ ಆಶ್ರಮವೊಂದಕ್ಕೆ ಭೇಟಿ ಕೊಟ್ಟರು. ಆ ಜನರ ಪೂಜಾವಿಧಾನಗಳನ್ನು ನೋಡುತ್ತಾ, ಸುಶ್ರಾವ್ಯ ಭಜನೆಗಳನ್ನು ಕೇಳುತ್ತಾ ಶ್ರೀರಾಮಕೃಷ್ಣರು ಬಹಳ ಹೊತ್ತು ಕುಳಿತಿದ್ದರು. ಶ್ರೀರಾಮಕೃಷ್ಣರು ಕಾಶೀಕ್ಷೇತ್ರದಲ್ಲಿ ಒಂದು ವಾರ ಕಾಲ ಇದ್ದರು. ಇಲ್ಲಿಂದ ಅವರು ಪ್ರಯಾಗ ಕ್ಷೇತ್ರಕ್ಕೆ ಹೋದರು. ಪ್ರಯಾಗದಲ್ಲಿ ಮೂರು ದಿನ ವಾಸ ಮಾಡಿ, ಮತ್ತೆ ಕಾಶಿಗೆ ಹಿಂದಿರುಗಿದರು. ಅಲ್ಲಿ ಮತ್ತೆ ಎರಡು ವಾರಗಳ ಕಾಲ ಇದ್ದು, ಅಲ್ಲಿಂದ ಬೃಂದಾವನಕ್ಕೆ ತೆರಳಿದರು. ಕಾಶಿಯಲ್ಲಿ ಅವರ ತಾಂತ್ರಿಕ ಗುರು ಭೈರವೀ ಬ್ರಾಹ್ಮಣಿಯ ಭೇಟಿಯೂ ಆಯಿತು. ✽